# ‘ಚಟ್ನಿ ಇಲ್ಲದೆ 100 ಇಡ್ಲಿ ತಿಂದೆ..!’

ಬೆಂಗಳೂರನ್ನು ಬಹುವಾಗಿ ಪ್ರೀತಿಸುವ ಅನೇಕ ವಿದೇಶೀಯರಿದ್ದಾರೆ. ಇಲ್ಲಿನ ಪರಿಸರ, ಆಹಾರ, ಉದ್ಯೋಗ, ಜನರ ಸ್ನೇಹಪರ ಗುಣ ಇವರನ್ನು ಸೆಳೆದಿರುವುದು ಇದಕ್ಕೆ ಕಾರಣ. ಅಟ್ಲಾಂಟದಿಂದ ಎಂಟು ವರ್ಷ ಹಿಂದೆ ಬಂದ ದಾಲೆ ಬೂನೆ ಕೂಡ ಇಂಥವರಲ್ಲಿ ಒಬ್ಬರು.

ಹೌದು, ದಾಲೆ ಬೂನೆ ಅಟ್ಲಾಂಟದಿಂದ 2008ರಲ್ಲಿ ಬೆಂಗಳೂರಿಗೆ ಬಂದವರು. ಇಲ್ಲಿನ ಉದ್ಯೋಗಾವಕಾಶದ ಬಗ್ಗೆ ಅಚ್ಚರಿ ವ್ಯಕ್ತಪಡಿಸುವ ಇವರು, ಇದಕ್ಕಾಗಿಯೇ ಈ ನಗರವನ್ನು ಬಹುವಾಗಿ ಪ್ರೀತಿಸುತ್ತಾರೆ. ಅಲ್ಲದೆ ಇದನ್ನು ತನ್ನ ಸ್ವಂತ ಊರು ಎಂದೇ ಭಾವಿಸುತ್ತಾರೆ. ಖಾಸಗಿ ಕಂಪೆನಿಯೊಂದರಲ್ಲಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ (ಸಿಇಒ) ಆಗಿರುವ ದಾಲೆ ಬೂನೆ, ತಮ್ಮ ಊರು ಅಟ್ಲಾಂಟ ಐತಿಹಾಸಿಕ ಪ್ರಸಿದ್ಧಿ ಪಡೆದಿದೆ ಎನ್ನುತ್ತಾರೆ.

ಇಲ್ಲಿಗೆ ಬರುವ ಮುನ್ನ ದಾಲೆ ಮುಂಬೈ ಹಾಗೂ ಚೆನ್ನೈಗಳಲ್ಲಿ ಚಿತ್ರೋದ್ಯಮದಲ್ಲಿ ಕೂಡ ತೊಡಗಿಸಿಕೊಂಡಿದ್ದರು.

‘ಬೆಂಗಳೂರಿನಲ್ಲಿ ನನ್ನ ಗೆಳೆಯನೊಬ್ಬ ಬೈಕ್‌ನಲ್ಲಿ ಇಡೀ ನಗರ ಸುತ್ತಿಸಿದ್ದ. ಅದಾದ ಬಳಿಕ ನಾನೂ ಬೈಕ್ ಖರೀದಿಸಿದೆ. ಒಮ್ಮೆ ಚೆನ್ನೈಯಿಂದ ಬೆಂಗಳೂರುವರೆಗೆ ಬೈಕ್‌ನಲ್ಲೇ ಬಂದಿದ್ದೆ. ಇದು ನನ್ನ ಬದುಕಿನಲ್ಲಿ ಮರೆಯಲಾರದ ಅನುಭವ ಹಾಗೂ ಇದರಿಂದ ರೋಮಾಂಚನವೂ ಆಗಿದೆ’ ಎಂದು ಹಳೆಯ ನೆನಪುಗಳನ್ನು ಮೆಲುಕು ಹಾಕುತ್ತಾರೆ.

‘ಬೆಂಗಳೂರು ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿದ್ದಲ್ಲದೆ ‘ಅಂತರಾಷ್ಟ್ರೀಯ ನಗರ’ ಎಂದೂ ಹೆಸರಾಗಿದೆ. ಈ ಊರಿಗೆ ಬರಲು ಇದೂ ಒಂದು ಕಾರಣ’ ಎನ್ನುವ ಇವರು, ‘ಈ ಊರಿನಲ್ಲಿ ನೆಲೆಸಬೇಕಾದರೆ ಯಾವುದೇ ವಿದೇಶೀಯನಿಗೆ ಭಾಷೆ ಸಮಸ್ಯೆ ಎದುರಾಗದು. ಕನ್ನಡವೇ ಇಲ್ಲಿನ ಆಡುಭಾಷೆಯಾದರೂ ಬಹುಭಾಷಾ ನಗರ ಎಂಬ ಹೆಗ್ಗಳಿಕೆಯೂ ಈ ನಗರಕ್ಕಿದೆ. ಆದರೆ ಚೆನ್ನೈಯಲ್ಲಿ ಕಾಯಂ ಆಗಿ ನೆಲೆಯೂರಬೇಕಾದರೆ ತಮಿಳು ಕಲಿಯಲೇಬೇಕು ಎಂಬ ಅಲಿಖಿತ ನಿಯಮವಿದೆ. ಇದರಿಂದ ನಾನು ಅಲ್ಲಿ ಬೇಸತ್ತಿದ್ದೆ. ತಮಿಳು ಭಾಷೆ ಬಾರದ ನನ್ನನ್ನು ಅಲ್ಲಿಯ ಜನ ವಿದೇಶೀಯನಂತೆಯೇ ಕಂಡಿದ್ದರು. ಆದರೆ ಇಲ್ಲಿ ಹಾಗಿಲ್ಲ, ಕನ್ನಡ ಬರದೇ ಇದ್ದರೂ ಜನ ಆತ್ಮೀಯವಾಗಿ ಮಾತನಾಡಿಸುತ್ತಾರೆ, ನಿಸ್ಸಂಕೋಚವಾಗಿ ಬೆರೆಯುವಂತೆ ಪ್ರೇರೇಪಿಸುತ್ತಾರೆ. ಇದಕ್ಕಾಗಿಯೇ ನಾನು ಬೆಂಗಳೂರನ್ನು ಪ್ರೀತಿಸುವುದು’ ಎಂದು ತಮ್ಮದೇ ಆದ ವ್ಯಾಖ್ಯಾನ ನೀಡುತ್ತಾರೆ ಈ ವಿದೇಶಿಗ.

ಊಟ ತಿಂಡಿಗಳ ಬಗ್ಗೆ ಇವರಿಗೆ ಎಲ್ಲಿಲ್ಲದ ವ್ಯಾಮೋಹ. ಇದಕ್ಕೆ ಕಾರಣ ಇಲ್ಲಿ ಸಿಗುವ ಸ್ವಾದಿಷ್ಟವಾದ ತಿಂಡಿಗಳು. ರೋಟಿ, ಚಪಾತಿ, ಫ್ರೈಡ್‌ರೈಸ್ ಅನ್ನು ಬಹುವಾಗಿ ಇಷ್ಟಪಡುವ ದಾಲೆ ಬೂನೆ ಅವರು ‘ಚಿಕನ್ 65’ ಅನ್ನು ಚಪ್ಪರಿಸಿಕೊಂಡು ಸವಿಯುತ್ತಾರಂತೆ. ಬೆಂಗಳೂರಿನ ಕೋರಮಂಗಲ, ಇಂದಿರಾನಗರ, ಜೆ.ಪಿ. ನಗರಗಳಲ್ಲಿ ಸಿಗುವ ಕಾಂಟಿನೆಂಟಲ್ ಫುಡ್ ರುಚಿಯಾಗಿರುತ್ತದೆ. ಅಮೆರಿಕದಲ್ಲಿ ಕೆಲ ವರ್ಷ ಇದ್ದಾಗ ‘ಕ್ರಿಸ್ಪಿ ಕ್ರೀಮಿ’ಯನ್ನು ಇಷ್ಟಪಟ್ಟು ತಿನ್ನುತ್ತಿದ್ದೆ. ಆದರೆ ಇಲ್ಲಿ ನಾನು ಅದರಿಂದ ವಂಚಿತನಾಗಿದ್ದೇನೆ’ ಎನ್ನುತ್ತಾರೆ.

## ಇಡ್ಲಿ ತಿನ್ನುವ ಸ್ಪರ್ಧೆ!

ಬೆಂಗಳೂರಿನಲ್ಲಿ ಕೆಲ ವರ್ಷ ಹಿಂದೆ ನಡೆದ ‘ಇಡ್ಲಿ ತಿನ್ನುವ ಸ್ಪರ್ಧೆ’ಯಲ್ಲಿ ಭಾಗವಹಿಸಿದ ನೆನಪು ಇವರಿಗೆ ಇನ್ನೂ ಹಸಿರಾಗಿದೆ. ಆ ಸ್ಪರ್ಧೆಯಲ್ಲಿ ದಾಲೆ ಬೂನೆ 100 ಇಡ್ಲಿಗಳನ್ನು ತಿಂದಿದ್ದಾರಂತೆ. ಅದೂ ಕೂಡ ಚಟ್ನಿ ಇಲ್ಲದೆ!. ಆದರೆ ಬಹುಮಾನ ಮಾತ್ರ ಬರಲಿಲ್ಲ. ಇದು ಇವರ ಜೀವನದ ಮರೆಯಲಾರದ ಘಟನೆಯೂ ಹೌದಂತೆ.



ಅಟ್ಲಾಂಟದಿಂದ ಬಂದ ದಾಲೆ ಬೂನೆ (ಚಿತ್ರ: ಎಸ್.ಕೆ.ದಿನೇಶ್)

ಉದ್ಯೋಗಾಕಾಂಕ್ಷಿಗಳಿಗೆ ಬೆಂಗಳೂರು ನಿಜಕ್ಕೂ ‘ಸ್ವರ್ಗ’ ಎನ್ನುವ ದಾಲೆ ಬೂನೆ, ನಾನು ಶಿಕ್ಷಣಕ್ಕಾಗಿ, ಕೆಲಸಕ್ಕಾಗಿ ಅನೇಕ ದೇಶಗಳನ್ನು ಸುತ್ತಿದ್ದೇನೆ. ಸ್ನೇಹಿತರು ಹೇಳುವ ಅನೇಕ ಸಂಗತಿಗಳನ್ನು ಕೇಳಿದ್ದೇನೆ. ಆದರೆ ಉದ್ಯೋಗ ಗಳಿಸಲು, ಸ್ವಂತ ಉದ್ಯಮ ಕೈಗೊಳ್ಳಲು ಬೆಂಗಳೂರಿಗಿಂತ ಉತ್ತಮ ನಗರ ಇನ್ನೊಂದಿಲ್ಲ’ ಎಂದು ಅಭಿಪ್ರಾಯಪಡುತ್ತಾರೆ.

ಬೆಂಗಳೂರಿನಲ್ಲಿವ ‘ವಿದೇಶೀಯರ ಸಂಘ’ದಲ್ಲಿ ದಾಲೆ ಬೂನೆಗೆ ಪ್ರಮುಖ ಸ್ಥಾನವಿದೆಯಂತೆ. ‘ಅಂತರ ದೇಶ’ (ಇಂಟರ್ ನೇಷನ್) ಸಮುದಾಯದಲ್ಲಿಯೂ ಇವರು ತೊಡಗಿಸಿಕೊಂಡು ಸಕ್ರಿಯರಾಗಿದ್ದಾರೆ. ಇದರಿಂದಾಗಿ ಬೇರೆ ಬೇರೆ ದೇಶಗಳಿಂದ ಬಂದ ಹಲವಾರು ಸ್ನೇಹಿತರು ಇವರಿಗೆ ಸಿಕ್ಕಿದ್ದಾರೆ ಎಂಬ ಸಮಾಧಾನವೂ ಇವರಿಗೆ ಇದ್ದಂತಿದೆ.

■ ಅವನೀಶ್